ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

.(ಪ)/ಪಿಆರ್/3518 /10-11.

ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಕಛೇರಿ,
ಭಾಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್,
ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20
ದಿನಾಂಕ: 10-01-2011

## ಕಾರ್ಯಾದೇಶ

ವಿಷಯ: ಗಾಂಧಿನಗರ ಉಪ-ವಿಭಾಗ ವಾರ್ಡ್ ಸಂಖ್ಯೆ: 77ರ ಪ್ರದೇಶದಲ್ಲಿ ಒಂದು ಆಟೋವನ್ನು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ನಿಯೋಜಿಸಿಕೊಂಡು ಸ್ವಚ್ಛತೆಗೊಳಿಸುವ ಕುರಿತು.

ಉಲ್ಲೇಖ: 1. ಪರಿಸರ ಅಧಿಕಾರಿ, ಗಾಂಧಿನಗರ ಉಪ-ವಿಭಾಗ ರವರ ದಿನಾಂಕ: 9-12-2010ರ ವರದಿ.

*******

ಪಶ್ಚಿಮ ವಲಯದ ಗಾಂಧಿನಗರ ಉಪ-ವಿಭಾಗ, ವಾರ್ಡ್ ಸಂಖ್ಯೆ: 77ರಲ್ಲಿ ಆಟೋ ಸಂಖ್ಯೆ:ಕೆಎ-02-4001 ಆಟೋ) ಅನ್ನು ನಿಯೋಜಿಸಿಕೊಂಡು ಸ್ವಚ್ಛತೆಯನ್ನು ಸಮರ್ಪಕವಾಗಿ ಮಾಡಲು, ದಿನಾಂಕ: 15-11-2010 ಮುಂದಿನ ಆದೇಶದವರೆಗೆ ಅಥವಾ ಟೆಂಡರ್ ಕರೆಯುವವರೆಗೆ. ಯಾವುದು ಮೊದಲೋ ಅಲ್ಲಿಯವರೆಗೆ ಕವಾಗಿ ಜಂಟಿ ಆಯುಕ್ತರು (ಪಶ್ಚಿಮ)ರವರ ಆದೇಶದನ್ವಯ ಆದೇಶಿಸಲಾಗಿದೆ.

ನಿಗಧಿಪಡಿಸಿರುವ ಒಂದು ತಿಂಗಳ ಮೊತ್ತ ರೂ. 16,000/- (ಹದಿನಾರು ಸಾವಿರ ರೂಪಾಯಿಗಳು ಮಾತ್ರ). ಸದ ಆದೇಶವು ದಿನಾಂಕ: 15-11-2010 ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತಿನೊಂದಿಗೆ ಕವಾಗಿ ಜಂಟಿ ಆಯುಕ್ತರು (ಪಶ್ಚಿಮ) ರವರ ಆದೇಶದನ್ವಯ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.

## ಷರತ್ತುಗಳು

ಗುತ್ತಿಗೆದಾರನ್ನು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳಿಗೆ ಆಗಿರಬೇಕಾದ ಕನಿಷ್ಟ ವಯಸ್ಸು 18 ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸದೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.

ಕೆಲಸದ ಸಮಯ ಬಗೆಗೆ ಪರಿಸರ ಅಧಿಕಾರಿ, ಗಾಂಧೀನಗರ ಉಪ - ವಿಭಾಗ ರವರ ನಿರ್ದೇಶನದನ್ವಯ ಕಾರ್ಯನಿರ್ವಹಿಸುವುದು.

ಕೇವಲ ಪುರುಷ ಕೆಲಸಗಾರರನ್ನು ಮಾತ್ರ ನೇಮಿಸತಕ್ಕದ್ದು.

4. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ (ಏಪ್ರಾನ್) ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು.

ಸ್ವಚತಾ ಕೆಲಸಕ್ಕೆ ಆಟೋ (ಮಿನಿಡಾರ್) ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.

6. ಸಾರ್ವಜನಿಕರಲ್ಲಿ ಯಾವುದೇ ದೂರು ಬರದಂತೆ ನೋಡಿಕೊಳ್ಳುವುದು.

ಮು.ತಿ.ನೋ.

7. ವಾಹನದ ಮುಂದೆ ವಾಹನದ ಸಂಖ್ಯೆ: ವಾರ್ಡ್ ಸಂಖ್ಯೆ ಹಾಗೂ ವಲಯದ ಹೆಸರು ಹಾಗೂ ಬಿ.ಬಿ.ಎಂ.ಪಿ. ತ್ಯಾಜ್ಯ ಸಾಗಣೆ ಆಟೋ ಎಂದು ಮುಂದುಗಡೆ ಕಡ್ಡಾಯವಾಗಿ ಬರೆಯಬೇಕು.
8. ಪ್ರತಿನಿತ್ಯ ಈ ವಾರ್ಡಿನಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಸಾಗಿಸತಕ್ಕದ್ದು.
9. ಕೆಲಸ ನಿರ್ವಹಿಸುವ ಪೂರ್ಣ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ.
10. ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ಗುತ್ತಿಗೆದಾರರನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗುವುದು.
11. ಕೆಲಸ ನಿರ್ವಹಿಸುವ ಪ್ರದೇಶವನ್ನು / ರಸ್ತೆಗಳ ವಿವರಗಳನ್ನು ಪರಿಸರ ಅಧಿಕಾರಿ, ಗಾಂಧಿನಗರ ಉಪ–ವಿಭಾಗ ರವರಿಂದ ಪಡೆಯತಕ್ಕದು ಹಾಗೂ ಅವರ ಆದೇಶ ಮತ್ತು ಮೇಲಾಧಿಕಾರಿಗಳ ಆದೇಶದಂತೆ ಕೆಲಸ ನಿರ್ವಹಿಸುವುದು.

ಜಂಟಿ ಆಯುಕ್ತರ (ಪಶ್ಚಿಮ)ರವರ ಪರವಾಗಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗುತ್ತಿಗೆದಾರರ ವಿಳಾಸ:
ಶ್ರೀಮತಿ. ಅನುಸೂಯ ಕೆ.
ನಂ. 1205, 6ನೇ ಮುಖ್ಯರಸ್ತೆ,
ಎಲ್.ಎನ್. ಬಡಾವಣೆ,
ಯಶವಂತಪುರ,
ಬೆಂಗಳೂರು – 560 022

ಪ್ರತಿಯನ್ನು:

- ಜಂಟಿ ಆಯುಕ್ತರು(ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
- ಸಹಾಯಕ ಹಣಕಾಸು ನಿಯಂತ್ರಕರು(ಪಶ್ಚಿಮ) ರವರ ಮಾಹಿತಿಗಾಗಿ ರವಾನಿಸಿದೆ.
- ಪರಿಸರ ಅಧಿಕಾರಿ, ಗಾಂಧಿನಗರ ಉಪ–ವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
- ಗುತ್ತಿಗೆದಾರರಿಗೆ/ ಕಛೇರಿ ಕಡತಕ್ಕೆ.